ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

50

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE :

# ಮೀಸಲು ಹೋರಾಟಕ್ಕೆ ಜಾತಿಗಣತಿ ಪರಿಹಾರ

ರಾಜ್ಯದಲ್ಲಿ ನಡೆಯುತ್ತಿರುವ ಮೀಸಲು ಹೋರಾಟದ ಬೆಂಕಿ ಶಮನಗೊಳಿಸಲು ಹಿಂದುಳಿದ ವರ್ಗಗಳ ಆಯೋಗ ಸಿದ್ಧಪಡಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಜನಗಣತಿ) ವರದಿ ಬಿಡುಗಡೆ ಮಾಡುವಂತೆ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರು ಪರಿಷತ್‌ನಲ್ಲಿ ಗುರುವಾರ ಒಕ್ಕೊರಲಿನಿಂದ ಒತ್ತಾಯಿಸಿದರು.



ಗಮನ ಸೆಳೆಯುವ ಸೂಚನೆ ಮೇಲೆ ನಡೆದ ಚರ್ಚೆಯಲ್ಲಿ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಎಚ್.ವಿಶ್ವನಾಥ್, "ಮೀಸಲು ಪ್ರಮಾಣ ಹೆಚ್ಚಳ, ಪ್ರವರ್ಗ ಬದಲಾವಣೆಯ ಬೇಡಿಕೆ ಪರಿಶೀಲನೆಗೆ ತ್ರಿಸದಸ್ಯ ಸಮಿತಿ ರಚಿಸುವುದರಿಂದ ಏನೇನೂ ಪ್ರಯೋಜನವಿಲ್ಲ. ಬದಲಿಗೆ ಸಿದ್ದರಾಮಯ್ಯ ಸಿಎಂ ಆಗಿದ್ದಾಗ ನಡೆಸಿದ ಜಾತಿ ಜನಗಣತಿಯಲ್ಲಿ ಪರಿಹಾರ ಸಿಗಲಿದೆ," ಎಂದು ಹೇಳಿದರು.

"ಎಚ್.ಕಾಂತರಾಜು ನೇತೃತ್ವದ ತಂಡವು ಜಾತಿ ಜನಗಣತಿ ವರದಿಯನ್ನು ಸಿದ್ಧಪಡಿಸಿದೆ. ಈ ವರದಿಯನ್ನು ಸ್ವೀಕರಿಸಲು ಏಕೆ ಹಿಂದೇಟು ಹಾಕಲಾಗುತ್ತಿದೆಯೋ ತಿಳಿಯದು. ಮೇಲ್ವರ್ಗದವರಿಂದ ಹಿಡಿದು ಕೆಳವರ್ಗದವರೆಗಿನ ಸ್ವಾಮೀಜಿಗಳು ಮೀಸಲಿಗಾಗಿ ನೂರಾರು ಕಿ.ಮೀ ಪಾದಯಾತ್ರೆ ನಡೆಸಿದ್ದಾರೆ. ಈ ಹಿಂದೆ ಅರಸರು ಹಾವನೂರು ಆಯೋಗ ರಚಿಸಿ, ಹಿಂದುಳಿದ ವರ್ಗಗಳಿಗೆ ಮೀಸಲು ಸೌಲಭ್ಯ ಕಲ್ಪಿಸಿದ್ದರು. ಆದರೆ, ಈಗ ಮೀಸಲಿಗಾಗಿ ಸ್ವಾಮೀಜಿಗಳು, ಸನ್ಯಾಸಿಗಳು ಹೋರಾಟ ನಡೆಸಬೇಕಾಗಿ ಬಂದಿದೆ," ಎಂದರು.

ಕೆ.ಪಿ.ನಂಜುಂಡಿ ವಿಶ್ವಕರ್ಮ, "ಜಾತಿ ಜನಗಣತಿ ವರದಿ ಜಾರಿಯಿಂದ ನಮ್ಮಂತಹ ಸಮುದಾಯಗಳಿಗೆ ಅನುಕೂಲವಾಗಲಿದೆ," ಎಂದರು.

ಪ್ರತಿಪಕ್ಷ ನಾಯಕ ಎಸ್.ಆರ್. ಪಾಟೀಲ್, "ಈಗ ಎಲ್ಲಾ ಸಮುದಾಯವೂ ಮೀಸಲು ಹೋರಾಟಕ್ಕೆ ಇಳಿದಿದೆ. ಇದಕ್ಕೆ ಅಂತ್ಯ ಹಾಡದಿದ್ದರೆ ಸಂಘರ್ಷದ ಪರಿಸ್ಥಿತಿ ಉದ್ಭವಿಸಲಿದೆ," ಎಂದು ಎಚ್ಚರಿಸಿದರು.